# ಪುನರ್‌ರಚಿತ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆ (RWBCIS)

## ಸುರಕ್ಷಿತ ಕೃಷಿಕರು, ದೇಶದ ಹೆಮ್ಮೆ

HDFC ERGO

Take it easy!

ತೋಟಗಾರಿಕೆ ಇಲಾಖೆ, ಕರ್ನಾಟಕ ಸರ್ಕಾರ ಮತ್ತು ಭಾರತ ಸರ್ಕಾರದಿಂದ ಜಾರಿಗೊಳಿಸಲಾದುದು

**ಪುನರ್‌ರಚಿತ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆ (RWBCIS)** ವಿಮೆ ಮಾಡಿಸಿರುವ ಕೃಷಿಕರಿಗೆ ಮಳೆ, ತಾಪಮಾನ, ಗಾಳಿ, ಆರ್ದ್ರತೆ ಮುಂತಾದ ಪ್ರತಿಕೂಲ ವಾತಾವರಣದಿಂದ ಉಂಟಾಗುವ ನಿರೀಕ್ಷಿತ ಬೆಳೆ ನಷ್ಟಗಳ ಕಾರಣದಿಂದಾಗುವ ಹಣಕಾಸಿನ ನಷ್ಟಗಳ ಸಂಭಾವ್ಯತೆಯ ಕಷ್ಟವನ್ನು ಕಡಿಮೆ ಮಾಡುವ ಗುರಿಯನ್ನು ಹೊಂದಿದೆ.

ಡಬ್ಲ್ಯೂಬಿಸಿಐಎಸ್‌ಯು ಪರಿಗಣಿಸಲಾದ ಬೆಳೆನಷ್ಟಗಳಿಗಳಿಗಾಗಿ ಬೆಳೆಗಾರರಿಗೆ ಪರಿಹಾರ ನೀಡುವಲ್ಲಿ ಬೆಳೆಯ ಇಳುವರಿಗಾಗಿ ''ಪ್ರಾಕ್ಸಿ'' ಯಾಗಿ ಹವಾಮಾನ ಮಾನದಂಡಗಳನ್ನು ಬಳಸುತ್ತದೆ. ಹವಾಮಾನ ಪ್ರಚೋದಕಗಳನ್ನು ಬಳಸಿಕೊಂಡು ಅನುಭವಿಸಿದ ನಷ್ಟಗಳ ವ್ಯಾಪ್ತಿಗೆ ಪಾವತಿಸುವ ರಚನೆಗಳನ್ನು ಅಭಿವೃದ್ಧಿಪಡಿಸಲಾಗಿದೆ.

ಈ ರೀತಿಯಲ್ಲಿ, ಈ ಯೋಜನೆಯು ಕೃಷಿಕರಿಗೆ ಆರ್ಥಿಕ ಸ್ಥಿರತೆಯನ್ನು ಒದಗಿಸುತ್ತದೆ ಹಾಗೂ ಆವಿಷ್ಕಾರಿ ಹಾಗೂ ಆಧುನಿಕ ಕೃಷಿ ಆಚರಣೆಗಳನ್ನು ಅಳವಡಿಸಿಕೊಳ್ಳಲು ಅವರಿಗೆ ಪ್ರೋತ್ಸಾಹ ನೀಡುವ ಮೂಲಕ ಕೃಷಿಯಲ್ಲಿ ನಿರಂತರತೆಯನ್ನು ಖಚಿತಪಡಿಸುತ್ತದೆ.



### ಈ ಯೋಜನೆಯಿಂದ ಯಾರು ಪ್ರಯೋಜನ ಪಡೆಯಬಹುದು

ಸೂಚಿಸಿರುವ ಕ್ಷೇತ್ರಗಳಲ್ಲಿ ಪಾಲು ದಾರಿಕೆ  ಹಾಗೂ ಗೇಣಿಯಮೇಲೆ ಸೂಚಿಸಿರುವ ಬೆಳೆಗಳ ಬೇಸಾಯ ಮಾಡುವವರನ್ನು ಒಳಗೊಂಡು, ಎಲ್ಲಾ ಕೃಷಿಕರು ವಿಮಾ ರಕ್ಷಣೆಗೆ ಅರ್ಹರಾಗಿರುತ್ತಾರೆ. ಹೀಗಿದ್ದಾಗ್ಯೂ ಕೃಷಿಕರ ಸೂಚಿಸಿತ/ವಿಮೆ ಮಾಡಿದ ಬೆಳೆಗಳು ವಿಮೆಗೆ ಒಳಪಟ್ಟಿರಬೇಕಾಗಿರುತ್ತದೆ. ಸಾಲಪಡೆಯುವ ಕೃಷಿಕರನ್ನೊಳಗೊಂಡು ಎಲ್ಲಾ ಕೃಷಿಕರಿಗಾಗಿ ಈ ಯೋಜನೆಯು ಸ್ವಯಂಪ್ರೇರಿತವಾಗಿರುತ್ತದೆ. ಸೂಚಿತ ಬೆಳೆಗಾಗಿ ಋತುಕಾಲಿಕ ಕಾರ್ಯಾಚರಣೆಯ ಸಾಲವನ್ನು ತೆಗೆದುಕೊಂಡಿರುವ ಎಲ್ಲಾ ಕೃಷಿಕರು ಅಂದರೆ ಯಾವುದೇ ಹಣಕಾಸಿನ ಸಂಸ್ಥೆಯಿಂದ (ಸಹಕಾರಿ ಬ್ಯಾಂಕ್‌ಗಳು,ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳು, ವಾಣಿಜ್ಯ ಬ್ಯಾಂಕ್‌ಗಳು, ಖಾಸಗಿ ಬ್ಯಾಂಕ್‌ಗಳು ಮುಂತಾದವು)ಸಾಲ ಪಡೆದವರು ಹಾಗೂ ನಿಗದಿತ ದಿನಾಂಕದ 7 ದಿನಗಳ ಮೊದಲು ಯೋಜನೆಯಿಂದ ಹೊರಬರಲು ಆಯ್ಕೆ ಮಾಡದಿರುವವರು, ಅವರ ಹಣಕಾಸು ಸಂಸ್ಥೆಗಳಿಂದ ಯೋಜನೆಯ ಅಡಿಯಲ್ಲಿ ನೋಂದಣಿಗಾಗಿ ಅರ್ಹರಾಗಿರುತ್ತಾರೆ.



### ಹವಾಮಾನದ ಅಪಾಯಗಳನ್ನು ಒಳಗೊಂಡಿರುತ್ತದೆ :

ಯೋಜನೆಯ ಅಡಿಯಲ್ಲಿ ಬೆಳೆಯ ನಷ್ಟಗಳಿಗೆ ಕಾರಣವಾಗುವ ಈ ಕೆಳಗಿನ ಹವಾಮಾನದ ಅಪಾಯಗಳನ್ನು ವಿಮಾರಕ್ಷಣೆಯು ಒಳಗೊಂಡಿರುತ್ತದೆ:

- ಮಳೆಯ ಕೊರತೆ , ಅತಿವೃಷ್ಟಿ, ಒಣ-ಹವೆ, ಬರ ಗಾಲ
- ತಾಪಮಾನ -ಅಧಿಕ ತಾಪಮಾನ
- ಗಾಳಿಯ ವೇಗ
- ಸಾಪೇಕ್ಷ ಆರ್ದ್ರತೆ
- ಮೇಲಿನ ಎ ದಿಂದ ಡಿವರೆಗಿನ ಅಪಾಯಗಳ ಸಂಯೋಜನೆ

ಮೇಲಿನ ಅಪಾಯಗಳನ್ನು ರಾಜ್ಯಸರ್ಕಾರದಿಂದ ಸೂಚಿಸಲಾಗಿದೆ. ಪ್ರತಿ ಆರ್‌ಯುಎಗಾಗಿ ನಿರ್ದಿಷ್ಟವಾಗಿ ವಿವಿಧ ಬೆಳೆಗಳ ಟರ್ಮ್- ಶೀಟ್/ಪ್ರಾಡಕ್ಟ್ ರಚನೆ, ರೆಫರೆನ್ಸ್ ಯೂನಿಟ್ ಏರಿಯಾ (ಆರ್‌ಯುಎ) ಹಾಗೂ ರೆಪರೆನ್ಸ್‌ವೆದರ್ ಸ್ಟೇಷನ್ (ಆರ್‌ಡಬ್ಲ್ಯೂಎಸ್).

### ಸ್ಕೀಮ್‌ನ ಲಾಭ ಪಡೆಯಲು ಕೃಷಿಕರಿಂದ ಕಡ್ಡಾಯವಾಗಿ ಬೇಕಾದ ದಸ್ತಾವೇಜುಗಳು

- ಆಧಾರ್ ಕಾರ್ಡ್‌ನ ಪ್ರತಿ
- ಸರಿಯಾಗಿ ತುಂಬಿಸಲಾದ ಪ್ರಸ್ತಾವ ಫಾರ್ಮ್‌ನ ಪ್ರತಿ
- ಇತ್ತೀಚೆಗಿನ ಜಮೀನಿನ ದಾಖಲೆ/7/12/ಹಕ್ಕುಗಳ ರಾಜ್ಯ ದಾಖಲೆ (ಆರ್‌ಓಆರ್)/ಜಮೀನಿನ ಸ್ವಾಧೀನತೆಯ ಪ್ರಮಾಣಪತ್ರ (ಎಲ್‌ಪಿಸಿ)/ಖಸಾರಾ ಇತ್ಯಾದಿಗಳ ಪ್ರತಿ
- ಅನ್ವಯವಾಗುವ ಒಪ್ಪಂದ/ಟೆನೆಂಟ್ ಕೃಷಿಕರ ಒಪ್ಪಂದಕ್ಕಾಗಿ ಅಫಿದಾವಿತ್
- ಐಎಫ್‌ಎಸ್‌ಸಿ ನಂಬರ್‌ಮತ್ತು ಬ್ಯಾಂಕ್ ಖಾತೆ ನಂಬರ್ ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ ಅಥವಾ ಕ್ಯಾನ್ಸಿಲ್ಡ್ ಚೆಕ್
- ಬೀಜ ಬಿತ್ತನೆಗಾಗಿ ಸ್ವಯ ಘೋಷಣೆ

### ಕ್ಲೇಮ್‌ಗಳ ಮೌಲ್ಯಮಾಪನ ಹಾಗೂ ಇತ್ಯರ್ಥ :

ಸೂಚಿತ ರೆಫರೆನ್ಸ್‌ವೆದರ್ ಸ್ಟೇಷನ್‌ನಿಂದ ದಾಖಲಿಸಲಾದ ಹವಾಮಾನದ ಡೇಟಾದ ಆಧಾರದ ಮೇಲೆ ಮಾತ್ರ ಕ್ಲೇಮ್‌ಗಳನ್ನು ಮೌಲ್ಯಮಾಪನ ಮಾಡಲಾಗುತ್ತದೆ ಹಾಗೂ ಪೂರ್ಣ ಪಾಲಿಸಿ ಅವಧಿಗಾಗಿ ಪ್ರಮಾಣೀಕೃತ ಹವಾಮಾನ ಡೇಟಾವನ್ನು ಸ್ವೀಕರಿಸಿದ ನಂತರ ಹಾಗೂ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಸಬ್ಸಿಡಿ ಸ್ವೀಕೃತಿಯ ನಂತರ ಕ್ಲೇಮ್‌ಗಳ ಪ್ರಕ್ರಿಯೆಗಳು ಪ್ರಾರಂಭವಾಗುತ್ತದೆ.

ಇನ್‌ಶ್ಯೂರನ್ಸ್ ಟರ್ಮ್ ಶೀಟ್‌ಗಳು, ಪಾವತಿಯ ರಚನೆ ಹಾಗೂ ಸ್ಕೀಮ್ ನಿಬಂಧನೆಗಳ ಪ್ರಕಾರ ಕ್ಲೇಮ್ ಮೌಲ್ಯಮಾಪನಗಳನ್ನು ಮಾಡಲಾಗುತ್ತದೆ.

ಒಂದುವೇಳೆ ಪ್ರತಿಕೂಲ ಹವಾಮಾನ ಸಂಭವಿಸಿದಲ್ಲಿ ಆರ್‌ಯುಎಯಲ್ಲಿ ವಿಮೆ ಮಾಡಿರುವ ಎಲ್ಲಾ ಕೃಷಿಕರು ಅಧಿಸೂಚಿತ ಬೆಳೆ ಬೆಳೆಯುತ್ತಿದ್ದರೆ ಒಂದೇ ಮಟ್ಟದ ಪ್ರತಿಕೂಲ ಹವಾಮನದ ಪರಿಸ್ಥಿತಿ ಹಾಗೂ ಒಂದೇ ರೀತಿಯ ಬೆಳೆನಷ್ಟದ ಅನುಪಾತವನ್ನು ಅನುಭವಿಸಿರುವುದಾಗಿ ಹಾಗೂ ಒಂದೇ ದರದ ಕ್ಲೇಮ್‌ಗಳಿಗಾಗಿ ಅರ್ಹರು ಎಂದು ಪರಿಗಣಿಸಲಾಗುತ್ತದೆ.

ಎಲ್ಲಾ ಪಾಲಿಸಿಗಳಿಗಾಗಿ ಕ್ಲೇಮ್‌ಗಳನ್ನು ರಾಜ್ಯ ಸರ್ಕಾರದಿಂದ ಸೂಚಿತ ಟರ್ಮ್ ಶೀಟ್‌ಗನುಸಾರವಾಗಿ ಬೆಳೆ - ಪ್ರಾಕಾರ ಹಾಗೂ ವೆದರ್ ಸ್ಟೇಶನ್ ಪ್ರಕಾರ ನಿಗದಿಮಾಡಲಾಗುತ್ತದೆ.

**ಸೂಚಿತ ಜಿಲ್ಲೆಗಳು, ಸೂಚಿತ ಬೆಳೆಗಳು, ವಿಮಾ ಮೊತ್ತ ಹಾಗೂ ಕೃಷಿಕರ ಪ್ರೀಮಿಯಮ್ ಹಾಗೂ ನೋಂದಣಿಯ ಕೊನೆಯ ದಿನಾಂಕ**

| ಜಿಲ್ಲೆಯ ಹೆಸರು | ಬೆಳೆಯ ಹೆಸರು | ವಿಮೆಯ ಮೊತ್ತ (ರೂ) | ರೈತರ ಪಾಲು (%) | ರೈತರ ಪಾಲಿನ ಮೊತ್ತ (ರೂ) | ದಾಖಲಾತಿಗೆ ಕೊನೆಯ ದಿನಾಂಕ |
|---|---|---|---|---|---|
| ಹಾವೇರಿ | ಮಾವು | 80000 | 5% | 4000 | 15 -ನವೆಂಬರ್-2020 |

**ಇಮೇಲ್ : pmfby.karnataka@hdfcergo.com**

**ಯೋಜನೆಯ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಪಡೆಯಲು,**
**ದಯವಿಟ್ಟು ಕರೆ ಮಾಡಿ : ಶುಲ್ಕ ರಹಿತ ಸಂ.: 1800 2660 700**

ಸಾಲ-ಪಡೆಯದ ಕೃಷಿಕರು ಅತಿ ಹತ್ತಿರದ ವಿತ್ತ ಸಂಸ್ಥೆಗಳು, ಅಂದರೆ, ರಾಷ್ಟ್ರೀಕೃತ ಬ್ಯಾಂಕ್, ಸಹಕಾರಿ ಬ್ಯಾಂಕ್, ಪ್ರಾಥಮಿಕ ಕೃಷಿ ಸಹಕಾರ ಸಂಸ್ಥೆ (ಪಿಎಸಿಎಸ್), ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್‌ಗಳು/ವಿಮಾ ಮಧ್ಯವರ್ತಿ/ಸಾಮಾನ್ಯ ಸೇವಾ ಕೇಂದ್ರ (ಸಿಎಸ್‌ಸಿ) ಇದರ ಮೂಲಕ ಸ್ವತ: ದಾಖಲುಗೊಳ್ಳುವುದು ಇವುಗಳ ಮೂಲಕ ತಮ್ಮ ಬೆಳೆ ವಿಮೆ ಮಾಡಿಕೊಳ್ಳಬಹುದು.

ಎಚ್‌ಡಿಎಫ್‌ಸಿ ಎರ್ಗೋ ಜನರಲ್ ಇನ್‌ಶೂರೆನ್ಸ್ ಕಂಪೆನಿ ಲಿಮಿಟೆಡ್. ಐಆರ್‌ಡಿಎಐ ರಿಜಿ.ನಂ.146. CIN: U66030MH2007PLC177117. ರಿಜಿಸ್ಟರ್ಡ್ ಮತ್ತು ಕಾರ್ಪೊರೇಟ್ ಕಛೇರಿ: 1ನೇ ಮಹಡಿ, ಎಚ್‌ಡಿಎಫ್‌ಸಿ ಹೌಸ್, 165-166 ಬ್ಯಾಕ್‌ಬೇ ರಿಕ್ಲಮೇಶನ್, ಎಚ್.ಟಿ. ಪಾರೆಖ್ ಮಾರ್ಗ, ಚರ್ಚ್‌ಗೇಟ್, ಮುಂಬಯಿ -400020. ಅಪಾಯದ ಅಂಶಗಳು, ನಿಯಮ ಮತ್ತು ನಿಬಂಧನೆಗಳ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಮಾರಾಟವನ್ನು ಅಂತಿಮಗೊಳಿಸುವ ಮೊದಲು ದಯವಿಟ್ಟು ಮಾರಾಟ ಬ್ರೋಷರ್/ಪ್ರಾಸ್ಪೆಕ್ಟಸ್‌ನ್ನು ಓದಿರಿ. ಈ ಮೇಲೆ ತೋರಿಸಲಾದ ಟ್ರೇಡ್ ಲೋಗೊ ಎಚ್‌ಡಿಎಫ್‌ಸಿ ಲಿ. ಮತ್ತು ಎರ್ಗೋ ಇಂಟರ್‌ನ್ಯಾಶನಲ್ ಎಜಿಗೆ ಸೇರಿದೆ ಮತ್ತು ಲೈಸನ್ಸ್‌ನಡಿಯಲ್ಲಿ ಕಂಪೆನಿಯಿಂದ ಉಪಯೋಗಿಸಲ್ಪಡುತ್ತಿದೆ. ಯುಐಎನ್: ಸಿಎಸ್‌ಸಿ - ಪುನರ್‌ರಚಿತ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆ - HDE-AG-P18-26-V01-17-18 | ಪುನರ್‌ರಚಿತ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆ - IRDAN125P0005V01201617. UID: 6311.